# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯದೇಗುಲ, ಮೊದಲನೆ ಮಹಡಿ, ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು-560 027.

## ಮಾಹಿತಿ ಹಕ್ಕು ಅಧಿನಿಯಮ, 2005 ರ ಪ್ರಕರಣ 4ರ ಅಡಿಯಲ್ಲಿ ಮಾಹಿತಿ, ವಿವರ

******

| | |
|---|---|
| ಕಛೇರಿ ಹೆಸರು ಮತ್ತು ವಿಳಾಸ : | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನ್ಯಾಯದೇಗುಲ ಕಟ್ಟಡ, ಮೊದಲನೆ ಮಹಡಿ, ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು-560 027. |
| ವೆಬ್‌ಸೈಟ್ ವಿಳಾಸ: | **www.kslsa.kar.nic.in** |

ಕಛೇರಿ ದೂರವಾಣಿ ಸಂಖ್ಯೆ, ಮತ್ತು ಇ-ಮೇಲ್ ವಿವರ :

080-22111875
080-22111730
080-22111729
080-22111714
080-22111716

karslsa@gmail.com
mskar-slsa@hck.gov.in

**ಕಾನೂನು ಸೇವೆಗಳ ಪ್ರಾಧಿಕಾರದ ಧ್ಯೇಯೋದ್ದೇಶಗಳು:**

- ಜನರಲ್ಲಿ ಕಾನೂನಿನ ಬಗ್ಗೆ ಅರಿವನ್ನು ಉಂಟು ಮಾಡುವುದು
- ಉಚಿತ ಕಾನೂನು ನೆರವು ಮತ್ತು ಸಲಹೆಯನ್ನು ಕೊಡುವುದು
- ಜನತಾ ನ್ಯಾಯಾಲಯ (ಲೋಕ ಅದಾಲತ್)ಗಳ ಮೂಲಕ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಜನರಿಗೆ ತ್ವರಿತವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ನ್ಯಾಯ ದೊರಕಿಸಿಕೊಡುವುದು

**ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತವಾಗಿ ದೊರಕುವ ಸೇವೆಗಳುಃ**

- ಉಚಿತ ಕಾನೂನು ಸೇವೆಗಳು (ನಿಶ್ಚಿತ ವರ್ಗಗಳವರಿಗೆ)
- ಉಚಿತ ಕಾನೂನು ಸಲಹೆ

- ರಾಜೀ ಸಂಧಾನ
- ಜನತಾ ನ್ಯಾಯಾಲಯಗಳ ಮೂಲಕ ನ್ಯಾಯಾಲಯಗಳಲ್ಲಿರುವ ಪ್ರಕರಣಗಳ ಇತ್ಯರ್ಥ
- ಮಧ್ಯಸ್ಥಿಕೆ ಕೇಂದ್ರಗಳ ಮೂಲಕ ಸಂಧಾನ ವ್ಯವಸ್ಥೆ
- ಪರ್ಯಾಯ ವ್ಯಾಜ್ಯ ಪರಿಹಾರದ ವ್ಯವಸ್ಥೆ
- ವ್ಯಾಜ್ಯಪೂರ್ವ ಸಮಸ್ಯೆಗಳ ಪರಿಹಾರ
- ಕಾನೂನು ಸಾಕ್ಷರತೆ/ಕಾನೂನು ಅರಿವು
- ಖಾಯಂ ಜನತಾ ನ್ಯಾಯಾಲಯ (P.L.A) ಮುಖಾಂತರ ಕೆಲವು ಸಾರ್ವಜನಿಕ ಉಪಯುಕ್ತ ಸೇವೆಗಳಿಗೆ ಸಂಬಂಧಿಸಿದ ಪ್ರಕರಣಗಳ ಇತ್ಯರ್ಥ.

**ಉಚಿತ ಕಾನೂನು ಸಲಹೆ ಮತ್ತು ಸೇವೆ/ನೆರವನ್ನು ಪಡೆಯಲು ಅರ್ಹರು:**

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು;
- ಮಹಿಳೆಯರು ಮತ್ತು ಮಕ್ಕಳು;
- ಕಾರ್ಖಾನೆಯ ಕಾರ್ಮಿಕರು;
- ಗುಂಪು ಘರ್ಷಣೆ, ಗಲಭೆ, ಪ್ರವಾಹ, ಕ್ಷಾಮ, ಭೂಕಂಪ, ಕೈಗಾರಿಕಾ ವಿನಾಶ ಮುಂತಾದವುಗಳಿಗೆ ತುತ್ತಾದವರು;
- ಮತೀಯ ಗಲಭೆಯ ಕಾರಣದಿಂದ ದೌರ್ಜನ್ಯಕ್ಕೆ ಬಲಿಯಾದವರು;
- ಮಾನಸಿಕ ಅಥವಾ ಬೇರೆ ಯಾವುದೇ ನ್ಯೂನ್ಯತೆ ಹೊಂದಿರುವವರು;
- ರಕ್ಷಣಾ ಗೃಹ, ಮನೋರೋಗಿಗಳ ಆಸ್ಪತ್ರೆ ಮುಂತಾದವುಗಳಲ್ಲಿ ಅಭಿರಕ್ಷೆಯಲ್ಲಿರುವವರು;
- ದೈಹಿಕ ವ್ಯಾಪಾರ ಅಥವಾ ಜೀತಕ್ಕೊಳಗಾದವರು ಮತ್ತು
- ವಾರ್ಷಿಕ ಆದಾಯ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದ ಜನರು ಉಚಿತ ಕಾನೂನು ಸೇವೆಯನ್ನು ಪಡೆಯಲು ಅರ್ಹರಿರುತ್ತಾರೆ.
- ಸರ್ವೋಚ್ಚ ನ್ಯಾಯಾಲಯದಲ್ಲಿ (ಸುಪ್ರೀಂ ಕೋರ್ಟ್‌ನ) ಕಾನೂನು ಸೇವೆಯನ್ನು ಪಡೆಯಲು ವಾರ್ಷಿಕ ಆದಾಯ ಐದು ಲಕ್ಷ ಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದ ಜನರೂ ಉಚಿತ ಕಾನೂನು ಸೇವೆಯನ್ನು ಪಡೆಯಲು ಅರ್ಹರಿರುತ್ತಾರೆ.
- ಉಚಿತ ಕಾನೂನು ನೆರವು ಎಂದರೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ವಕೀಲರ ಫೀಸು ಮತ್ತು ನ್ಯಾಯಾಲಯ ಶುಲ್ಕ ಹಾಗೂ ಇತರೆ ವೆಚ್ಚಗಳನ್ನು ಸಂಪೂರ್ಣವಾಗಿ ರಾಜ್ಯ ಪ್ರಾಧಿಕಾರದಿಂದಲೇ ಭರಿಸಲಾಗುವುದು.

- ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದವರು ಕಾನೂನು ಸೇವೆಗಳ ಸಂಸ್ಥೆಗಳಿಗೆ ಸೂಚಿಸಿರುವ ಮಾರ್ಗದರ್ಶನದಂತೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರದಲ್ಲಿರುವ ಬಾಲ ನ್ಯಾಯ ಮಂಡಳಿಯ ರಕ್ಷೆಯಲ್ಲಿರುವ ಮಕ್ಕಳು ಉಚಿತ ಕಾನೂನು ಸೇವೆಯನ್ನು ರಾಜ್ಯ/ಜಿಲ್ಲಾ ಪ್ರಾಧಿಕಾರದಿಂದ ಪಡೆಯಬಹುದಾಗಿರುತ್ತದೆ. ಈ ನ್ಯಾಯ ಮಂಡಳಿಯಲ್ಲಿರುವ ಮಕ್ಕಳ ಸಮಸ್ಯೆಗಳ ಬಗ್ಗೆ ನುರಿತ ವಕೀಲರಿಂದ ಸಮಸ್ಯೆಗಳನ್ನು ಪರಿಹರಿಸುವ ಕ್ರಮ, ಮಕ್ಕಳ ಸಂರಕ್ಷಣೆ ಇತರೇ ವ್ಯವಸ್ಥೆಯನ್ನು ರಾಜ್ಯ/ಜಿಲ್ಲಾ ಪ್ರಾಧಿಕಾರದ ಮೂಲಕ ವ್ಯವಸ್ಥೆ ಮಾಡಲಾಗುವುದು.
- ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರದಲ್ಲಿರುವ ಬಾಲ ನ್ಯಾಯ ಮಂಡಳಿ ಅಡಿಯಲ್ಲಿ ಬರುವ ಮಕ್ಕಳಿಗೆ ಉಚಿತ ಕಾನೂನು ಸೇವೆಗಳನ್ನು ನೀಡಲಾಗುವುದು.
- ವಿಚಾರಣಾಧೀನ ಖೈದಿಗಳಿಗೆ ಉಚಿತ ಕಾನೂನು ಸೇವೆಗಳನ್ನು ನೀಡಲಾಗುವುದು.

**ಕರ್ನಾಟಕ ಸಂತ್ರಸ್ಥರ ಪರಿಹಾರ ಯೋಜನೆ:**

- ಕರ್ನಾಟಕ ಸಂತ್ರಸ್ಥರ ಪರಿಹಾರ ಯೋಜನೆ, 2011 (Karnataka Victim Compensation Scheme 2011) ಅಡಿಯಲ್ಲಿ ಅಂದರೆ ಭಾರತ ದಂಡ ಪ್ರಕ್ರಿಯಾ ಸಂಹಿತೆ (Cr.P.C) ಕಲಂ 357 ಎ ಅಡಿಯಲ್ಲಿ ಅಪರಾಧದಿಂದ ವೈಯಕ್ತಿಕ ಮತ್ತು ಆಸ್ತಿಗೆ ಸಂಬಂಧಪಟ್ಟಂತೆ ನಷ್ಟ ಮತ್ತು ಹಾನಿಯನ್ನು ಅನುಭವಿಸಿದ ಸಂತ್ರಸ್ತರು ಮತ್ತು ಅವರ ಅವಲಂಬಿತರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸುವ ಸಲುವಾಗಿ "ಸಂತ್ರಸ್ತರ ಪರಿಹಾರ ಯೋಜನೆ" (ವಿಕ್ಟಿಮ್ ಕಾಂಪನ್ಸೇಶನ್ ಸ್ಕೀಮ್) ಕರ್ನಾಟಕ ಸರ್ಕಾರವು ಹೊರಡಿಸಿರುವ ಅಧಿಸೂಚನೆ ಸಂಖ್ಯೆ:ಎಚ್.ಡಿ.1ಪಿಸಿಬಿ.2011, ದಿನಾಂಕ:22.02.2012 ರಂದು ಪ್ರಾರಂಭವಾಗಿದ್ದು (ಕರ್ನಾಟಕ ರಾಜ್ಯ ಪತ್ರದಲ್ಲಿ 19.04.2012ರಂದು ಪ್ರಕಟಣೆಯಾಗಿದ್ದು,) ಆ ಅಧಿಸೂಚನೆಯ ಪ್ರಕಾರ ಅಪರಾಧದಿಂದ ನಷ್ಟ ಮತ್ತು ಹಾನಿಯನ್ನು ಅನುಭವಿಸಿದ ಸಂತ್ರಸ್ಥರು ಮತ್ತು ಅವರ ಅವಲಂಬಿತರು ಪರಿಹಾರ ಧನವನ್ನು ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ ಪಡೆಯಬಹುದಾಗಿದೆ.

## ರಾಜ್ಯ ಪ್ರಾಧಿಕಾರವು ಹಮ್ಮಿಕೊಂಡಿರುವ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳು

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಈ ಕೆಳಕಂಡ ವಿಶೇಷ ಕಾರ್ಯಕ್ರಮಗಳನ್ನು ರಾಜ್ಯ ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದೆ.

### 1. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಅಸಂಘಟಿತ ಕ್ಷೇತ್ರಗಳಲ್ಲಿನ ಕೆಲಸಗಾರರಿಗೆ ಕಾನೂನು ಸೇವೆಗಳು) ಯೋಜನೆ 2015

ಹೆಚ್ಚಿನ ಅಸಂಘಟಿತ ಕೆಲಸಗಾರರು (ಸುಮಾರು ಶೇಕಡ 52% ರಷ್ಟು) ವ್ಯವಸಾಯ/ಕೃಷಿಯಲ್ಲಿ ಇದ್ದಾರೆ. ಇತರೆ ಮುಖ್ಯ ಉದ್ಯೋಗಗಳೆಂದರೆ ನಿರ್ಮಾಣ ಕಾರ್ಯ, ಸಣ್ಣ ಉದ್ಯೋಗಗಳು, ಕಂಟ್ರಾಕ್ಟರ್ ಮೂಲಕ ದೊಡ್ಡ ಉದ್ದಿಮೆಗಳಲ್ಲಿ ಕೆಲಸ ಮಾಡುವವರು, ಗುಡಿಗಾರಿಕೆ/ ಕುಶಲಕರ್ಮಿಗಳು, ಗೃಹ ಸಂಬಂಧಿತ ಕೆಲಸ ಕಾರ್ಯಗಳು, ವನಸಂಪನ್ಮೂಲಗಳ ಅವಲಂಭಿತರು, ಮೀನುಗಾರಿಕೆ, ಸ್ವಉದ್ಯೋಗಗಳು ಉದಾ: ರಿಕ್ಷಾ ಚಾಲಕರು, ಆಟೋ ಚಾಲಕರು, ಕೂಲಿಗಳು ಮುಂತಾದವರು.

ಪ್ರಸಕ್ತ ವರ್ಷದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಅಳವಡಿಸಲಾಗಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಕಾರ್ಮಿಕ ಇಲಾಖೆ, ಕಾರ್ಮಿಕ ಕಲ್ಯಾಣ ಮಂಡಳಿ, ಕಾನೂನು ವಿದ್ಯಾಲಯಗಳು, ಶಾಲೆಗಳು, ಕಾರ್ಮಿಕ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಸ್ವಾಯತ್ತ ಸಂಸ್ಥೆಗಳು ಇವರುಗಳ ಸಹಕಾರದೊಂದಿಗೆ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಎ.ವಿ. ಚಂದ್ರಶೇಖರ್, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀ ಪ್ರಕಾಶ್ ಚನ್ನಪ್ಪ ಕುರುಬೆಟ್, ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ. ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಿರುತ್ತದೆ.

## 2. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಸಾಗಾಣಿಕೆ ಹಾಗೂ ವಾಣಿಜ್ಯ ಲೈಂಗಿಕ ಶೋಷಣೆಯ ಸಂತ್ರಸ್ತರ) ಯೋಜನೆ 2015.

**ಯೋಜನೆಯ ಹಿನ್ನಲೆ :**

ಕಾನೂನು ಸೇವೆಗಳ ಪ್ರಾಧಿಕಾರದ ಅಧಿನಿಯಮ 1987 ರ ಪ್ರಸ್ತಾವನೆಯು ಸಮಾಜದಲ್ಲಿನ ನಿಶ್ಯಕ್ತ ಹಿಂದುಳಿದ ವರ್ಗಗಳನ್ನು ಗಮನದಲ್ಲಿಟ್ಟುಕೊಂಡು ಅವರು ನ್ಯಾಯದಾನ ಅವಕಾಶಗಳಿಂದ ವಂಚಿತರಾಗದಂತೆ ಎಲ್ಲಾ ನಾಗರೀಕರಿಗೆ ನ್ಯಾಯದೊರಕಿಸಲು ಬದ್ಧವಾಗಿದೆ.

ವ್ಯಾಪಾರಿ ಲೈಂಗಿಕ ಶೋಷಣೆ (ಇಷ್ಟಪಟ್ಟೋ – ಇಲ್ಲದೆಯೋ) ಗೆ ಒಳಗಾಗುವವರು ಬಹಳ ಕನಿಷ್ಟ ಗುಂಪಿನವರು. ಅವರ ಹಕ್ಕುಗಳು ಮರೆತು ಹೋಗಿವೆ. ಅವರ ಜೀವನ ವಿಧಾನ, ಜೀವನ ಸ್ಥಿತಿ ಯಾರಿಗೂ ಬೇಕಾಗಿಲ್ಲ. ಅವರಿಗೆ, ಅವರ ಮಕ್ಕಳಿಗೆ ಮುಂದೆ ಏನಾಗುವುದೆಂಬುದರಲ್ಲಿ ಯಾರಿಗೂ ಆಸಕ್ತಿ ಇಲ್ಲ. ಆದರೂ ಸಹ ಅವರೆಲ್ಲರೂ ಸರ್ಕಾರದ ವಿವಿಧ ಯೋಜನೆಗಳ ಸವಲತ್ತುಗಳಿಗೆ ಅರ್ಹರು. ಏಕೆಂದರೆ, ಅವರು ಸಹಾ ಹಿಂದುಳಿದ ಕನಿಷ್ಟ ಗುಂಪಿನ ಮತ್ತು ಇತರ ಸಾಮಾಜಿಕ ಹಿಂದುಳಿದ ಅಂಚಿನಲ್ಲಿರುವ ವರ್ಗಗಳಂತೆಯೇ ಎಲ್ಲಾ ಸೌಕರ್ಯಗಳಿಗೂ ಅರ್ಹರು.

ಲೈಂಗಿಕ ವ್ಯಾಪಾರೀಕರಣಕ್ಕೊಳಗಾದ ಶೋಷಿತರು, ಶೋಷಣೆ ಹಾಗು ಶೋಷಣೆಯಿಂದ ಪಾರಾದನಂತರವೂ ಮಾನಸಿಕ ದುಸ್ಥಿತಿಗೆ ಒಳಗಾಗುತ್ತಾರೆ. ಅವರನ್ನು

ಅದೇ ಸ್ಥಿತಿಯಲ್ಲಿ ಇರಿಸಬಯಸುವ ಹಾಗೂ ಮೊಕದ್ದಮೆ ನಡೆಸದಂತೆ ಕಾಡುವ ವ್ಯಾಪಾರಿ/ವರ್ತಕರಿಂದ ರಕ್ಷಿಸಬೇಕಾಗಿದೆ. ಇದು ಅವರ ಜೀವನೋಪಾಯದ ಪ್ರಶ್ನೆಯಾಗಿದ್ದು ತಕ್ಕದಾದ ಪರಿಹಾರ ಇಲ್ಲವಾದಲ್ಲಿ ಅಂತಹವರು ಪುನಃ ಅದೇ ವೃತ್ತಿಗೆ ಮರಳುವ ಸಾಧ್ಯತೆಗಳು ಹೆಚ್ಚು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅರೆಕಾಲಿಕ ಸ್ವಯಂ ಸೇವಕರು, ಕಾನೂನು ವಿದ್ಯಾಲಯದ ವಿದ್ಯಾರ್ಥಿಗಳು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸ್ವಾಯತ್ತ ಸಂಸ್ಥೆಗಳು ಇವರುಗಳ ಸಹಕಾರದೊಂದಿಗೆ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಅಜಿತ್ ಜೆ. ಗುಂಜಾಳ್, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀಮತಿ ಅಮೃತ ಎಸ್ ರಾವ್, ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ. ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯಿಂದ ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಲಾಗಿರುತ್ತದೆ.

## 3. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಬಡತನ ನಿರ್ಮೂಲನ ಪರಿಣಾಮಕಾರಿ ಯೋಜನೆ) ಯೋಜನೆ 2015.

**ಯೋಜನೆಯ ಹಿನ್ನಲೆ :**

ಅನೇಕ ಸಂದರ್ಭಗಳಲ್ಲಿ ಬಡತನ ನಿರ್ಮೂಲನೆ ಮತ್ತು ಸಾಮಾಜಿಕ ಭದ್ರತಾ ಕಾರ್ಯಗಳು ಅದರ ಅಸಮರ್ಥತೆ, ಸಾಮಾಜಿಕ ರಕ್ಷಣೆ, ಆರ್ಥಿಕ ಹಿಂದುಳಿಕೆ ಮತ್ತು ಶೋಷಣೆ, ಸಾಮಾಜಿಕ ಮೌಲ್ಯಗಳು, ಸಾಂಸ್ಕೃತಿಕ ಪದ್ಧತಿಗಳು ಬೇಧ-ಭಾವ ಮುಂತಾದವು ಫಲಾನುಭವಿಗಳಿಗೆ ತಲುಪದಿರಲು ಕಾರಣ. ಈ ಸಂದರ್ಭದಲ್ಲಿ ಕಾನೂನು

ಸೇವೆಗಳ ಪ್ರಾಧಿಕಾರಗಳು ಸಕ್ರಿಯವಾಗಿ ಬಡತನ ನಿರ್ಮೂಲನೆಯ ಕಾರ್ಯರಚನೆ ಯಾವ ಫಲಾನುಭವಿಗಳ ಉದ್ದೇಶಕ್ಕಾಗಿದೆಯೋ ಅಂತಹವರ ಗಮನಕ್ಕೆ ತರಬೇಕು. ಮುಂದುವರೆದು ಬಡತನ ನಿರ್ಮೂಲನಾ ಕಾರ್ಯಗಳಲ್ಲಿ ಕಡೆಯವರೆಗೂ ಇರುವ ಕಾನೂನು ಸೇವೆಗಳ ಪ್ರಾಧಿಕಾರವು ಬಡತನ ನಿರ್ಮೂಲನಾ ಕಾರ್ಯಗಳ ಸೌಲಭ್ಯ ಒದಗಿಸಲು ಅತೀಸೂಕ್ತವಾಗಿವೆ. ಆದ್ದರಿಂದ ಈ ಯೋಜನೆಯು ಬಡತನ ನಿರ್ಮೂಲನ ಮತ್ತು ಸಾಮಾಜಿಕ ಭದ್ರತೆಯನ್ನು ಒಂದು ಚೌಕಟ್ಟಿನಲ್ಲಿ ಉದ್ದೇಶಿತ ಫಲಾನುಭವಿಗಳ ಸೌಕರ್ಯಕ್ಕಾಗಿ ಮತ್ತು ವಿಧಾನದ ಪರಿಣಾಮಕಾರಿ ಪುನರ್ವಿಮರ್ಶೆಗೆ ಮಾದರಿಯಾಗಬೇಕು. ಈ ಯೋಜನೆಗಳ ರಚನೆಯಲ್ಲಿ ಇರಬಹುದಾದ ಸ್ಥಳೀಯ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಬೇಡಿಕೆಗಳನ್ನು ಪರ್ಯಾಲೋಚಿಸಿ ಸಾಕಷ್ಟು ಹೊಂದಾಣಿಕೆಯಿಂದ ಸ್ಥಳೀಯ ಕಾನೂನು ಪ್ರಾಧಿಕಾರಗಳಿಗೆ ರಾಷ್ಟ್ರೀಯ ಯೋಜನೆಗಳನ್ನು ಅವಶ್ಯವಿರುವಂತೆ ಉಪಯೋಗಿಸಲು ರಚಿಸಲಾಗಿದೆ. ಬಡತನವು ವೈವಿಧ್ಯ ಪರಿಮಾಣಗಳಿಂದ ಕೂಡಿದ್ದು ಉಂಟಾಗುವ ಅನುಭವ, ಅದು ಕೇವಲ ವರಮಾನಕ್ಕಷ್ಟೇ ಸೀಮಿತವಲ್ಲ ಎನ್ನುವ ತಳಹದಿಯ ಮೇಲೆ ಈ ಯೋಜನೆ ನಿರ್ಮಿಸಲ್ಪಟ್ಟಿದೆ. ವೈವಿದ್ಯ ಪರಿಮಾಣಗಳ ಬಡತನದಲ್ಲಿ ಆರೋಗ್ಯ (ಮಾನಸಿಕ ಆರೋಗ್ಯ ಒಳಗೊಂಡು), ವಸತಿ, ಪೋಷಕಾಂಶಗಳು, ಉದ್ಯೋಗ, ನಿವೃತ್ತಿ ವೇತನ, ಮಾತೃತ್ವ ರಕ್ಷಣೆ, ಮಕ್ಕಳ ಮರಣ ಸಂಖ್ಯೆ, ನೀರಿಗೆ ಅವಕಾಶ, ಶಿಕ್ಷಣ ನೈರ್ಮಲೀಕರಣ, ಸಹಾಯಧನ, ಮೂಲ ಸೇವೆಗಳು, ಸಾಮಾಜಿಕ ಬಹಿಷ್ಕಾರ, ಭೇಧ-ಭಾವ ಮುಂತಾದವುಗಳು ಸೇರಿವೆ. ಮುಂದುವರೆದು ನಿರ್ಧಿಷ್ಟ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ವಿವಿಧ ಬಡತನಕ್ಕೊಳಗಾಗುವ, ಕೆಳಸ್ಥರದ ಗುಂಪುಗಳು, ಅಸಂಖ್ಯಾತ ವಿಶಿಷ್ಠ ರೀತಿಯ ಬಡತನ ಅನುಭವಿಸುವುದನ್ನು ಗಮನದಲ್ಲಿಟ್ಟುಕೊಂಡು ವಿಶೇಷ ಯೋಜನೆಗಳನ್ನು ಗುರ್ತಿಸಬೇಕು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಮಾಜ ಕಲ್ಯಾಣ ಇಲಾಖೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಮತ್ತು ಸ್ವಾಯತ್ತ ಸಂಸ್ಥೆಗಳು ಇವರುಗಳ ಸಹಕಾರದೊಂದಿಗೆ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕ್ರಮ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿಮ್ಹಾನ್ಸ್, ಕಾನೂನು ಕಾಲೇಜುಗಳು, ಆರೋಗ್ಯ ಇಲಾಖೆ ಮತ್ತು ಸ್ವಾಯತ್ತ ಸಂಸ್ಥೆಗಳು ಇವರುಗಳ ಸಹಕಾರದೊಂದಿಗೆ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕ್ರಮ ತೆಗೆದುಕೊಂಡು, ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಎ.ಎನ್. ವೇಣುಗೋಪಾಲ ಗೌಡ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀ ಕೆ.ಎಮ್. ಪುಟ್ಟಸ್ವಾಮಿ, ನ್ಯಾಯಾಂಗ ಅಧಿಕಾರಿಗಳು ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯಿಂದ ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಲಾಗಿರುತ್ತದೆ.

**4. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಮಾನಸಿಕ ರೋಗಿಗಳ ಮತ್ತು ಮಾನಸಿಕ ಅಶಕ್ತ ವ್ಯಕ್ತಿಗಳಿಗೆ ಕಾನೂನು ಸೇವೆಗಳು) ಯೋಜನೆ 2015.**

**ಯೋಜನೆಯ ಹಿನ್ನಲೆ :**

ಅಸಮರ್ಥತೆಯಿಂದ ಬಳಲುವ ಅದರಲ್ಲೂ ಮಾನಸಿಕ ರೋಗ ಮತ್ತು ಮಾನಸಿಕ ಹಿನ್ನಡೆಯಂತಹ ತಡೆಗಳಿಂದ ಪೀಡಿತರಾದವರು ಯಾವುದೇ ಅಧಿಕಾರಿಗಳ ಅಥವಾ ಪ್ರಾಧಿಕಾರಗಳ ಗಮನಕ್ಕೆ ಬೇಗ ಬರುವುದಿಲ್ಲ. ಅಂತಹವರು ನಿರ್ಲಕ್ಷಕ್ಕೊಳಗಾಗಿ

"ಸಾಮಾಜಿಕ ಕಲ್ಯಾಣದಿಂದ ಅವರನ್ನು ನೋಡುವ ದೃಷ್ಠಿ ಕೇವಲ ವಿಶೇಷ ರಕ್ಷಣೆಗೆ ಅರ್ಹರೆಂದು ರಾಜ್ಯ ಮತ್ತು ಸಮಾಜ ತಿಳಿಯುತ್ತದೆ.

ಆದ್ದರಿಂದ ಈ ಹಿನ್ನಲೆಯಲ್ಲಿ ಹೊಸ ಯೋಜನೆ ಮಾನಸಿಕ ರೋಗಿ ಹಾಗೂ ಮಾನಸಿಕ ಅಸಮರ್ಥತೆ ಹೊಂದಿರುವ ವ್ಯಕ್ತಿಗಳಿಗೆ ಕಾನೂನು ನೆರವು ಯೋಜನೆಯನ್ನು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಮಾನಸಿಕ ರೋಗಿ ಹಾಗೂ ಮಾನಸಿಕ ಅಸಮರ್ಥತೆ ಉಳ್ಳವರಿಗೆ ಕಾನೂನು ನೆರವು) ಯೋಜನೆ 2015. ರೂಪಿಸಲಾಗಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿಮ್ಹಾನ್ಸ್, ಕಾನೂನು ಕಾಲೇಜುಗಳು, ಆರೋಗ್ಯ ಇಲಾಖೆ ಮತ್ತು ಸ್ವಾಯತ್ತ ಸಂಸ್ಥೆಗಳು ಇವರುಗಳ ಸಹಕಾರದೊಂದಿಗೆ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕ್ರಮ ತೆಗೆದುಕೊಂಡು, ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಟಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಕೆ.ಎನ್. ಫಣೀಂದ್ರ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀಮತಿ ಪ್ರತಿಭಾ ಬಂಡುರಾವ್ ಕುಲಕರ್ಣಿ, ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ. ಗೃಹ ಇಲಾಖೆ ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಿರುತ್ತದೆ.

**5. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಮಕ್ಕಳಿಗೆ ಶಿಶು ಸ್ನೇಹಿ ಕಾನೂನು ಸೇವೆಗಳು ಮತ್ತು ಅವುಗಳ ಸಂರಕ್ಷಣೆ) ಯೋಜನೆ 2015.**

**ಯೋಜನೆಯ ಹಿನ್ನಲೆ :**

ನಮ್ಮ ಸಂವಿಧಾನದ ಕರ್ತೃಗಳಿಗೆ ದೇಶದ ಉನ್ನತಿ ಮಕ್ಕಳ ಅಭಿವೃದ್ಧಿಯಿಂದಲೇ ಸಾಧ್ಯ ಎಂದು ತಿಳಿದಿತ್ತು, ಆದ್ದರಿಂದ ಮಕ್ಕಳನ್ನು ಶೋಷಣೆಯಿಂದ ರಕ್ಷಿಸುವುದು

ಮುಖ್ಯ. ಭಾರತ ಸಂವಿಧಾನ ದೇಶದ ಎಲ್ಲಾ ಪೌರರಂತೆ ಮಕ್ಕಳಿಗೂ ಹಕ್ಕುಗಳನ್ನು ನೀಡಿ ಅವರ ವಿಶೇಷ ಸ್ಥಾನಕ್ಕೆ ವಿಶೇಷ ಹಕ್ಕುಗಳನ್ನು ಅಧಿನಿಯಮಗೊಳಿಸಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಶಿಕ್ಷಣ ಇಲಾಖೆ, ಕಾನೂನು ವಿದ್ಯಾಲಯದ ವಿದ್ಯಾರ್ಥಿಗಳು, ಎನ್.ಎಸ್.ಎಸ್. ಮತ್ತು ಎನ್.ಸಿ.ಸಿ. ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಲಹಾ ಕೇಂದ್ರಗಳ ಸಹಯೋಗದೊಂದಿಗೆ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕ್ರಮ ತೆಗೆದುಕೊಂಡು, ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಟಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಅಜಿತ್ ಜೆ. ಗುಂಜಾಳ್, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀಮತಿ ಅಮೃತ ಎಸ್ ರಾವ್, ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ. ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಿರುತ್ತದೆ.

**6. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಬುಡಗಟ್ಟು ಜನಗಳ ಹಕ್ಕು ಜಾರಿ ಮತ್ತು ಸಂರಕ್ಷಣೆ) ಯೋಜನೆ 2015.**

**ಯೋಜನೆಯ ಹಿನ್ನಲೆ :**

ದೇಶದ ಸ್ವಾತಂತ್ರ್ಯದವರೆಗೂ ಈ ಜನಗಳು ರಾಷ್ಟ್ರ ದೃಶ್ಯದಿಂದ, ಮುಖ್ಯ ವಾಹಿನಿಯಿಂದ ಬೇರೆಯಾಗಿಯೇ ದೂರದ ಕಠಿಣವಾದ ಅರಣ್ಯ ಪ್ರದೇಶಗಳಲ್ಲಿ (ಸ್ವಂತಕ್ಕೆ ತಕ್ಕ) ಸ್ವಯಂಪೂರ್ಣ ಜೀವನ ನಡೆಸುತ್ತಿದ್ದರು. ಬ್ರಿಟೀಷ್ ಸಾಮ್ರಾಜ್ಯಶಾಹಿ ಆಡಳಿತವು ಭಾರತದಲ್ಲಿ ಬುಡಕಟ್ಟು ಜನರಿಗೆ ಸರ್ವಾಧಿಕಾರ ಅಥವಾ ಶೋಷಣೆಯ ರೂಪದ್ದಾಗಿತ್ತು. ಅವರ ಆಸಕ್ತಿ ಈ ಬುಡಕಟ್ಟು ಜನಾಂಗದವರನ್ನು ಬೇರೆಯಾಗಿಯೇ ಇರಲು ಬಿಟ್ಟು ದೇಶದ ಮುಖ್ಯವಾಹಿನಿಗೆ ತರುವುದರಲ್ಲಿ ಇರಲಿಲ್ಲ.

ಆದರೆ ದೇಶದ ಸ್ವಾತಂತ್ರ್ಯದ ನಂತರ ಭಾರತದ ಸಂವಿಧಾನವು ಬುಡಕಟ್ಟು ಜನಾಂಗದ ಏಳಿಗೆಗಾಗಿ ಸಂಸತ್ತಿನಲ್ಲೂ ಅವರಿಗೆ ವಿಶೇಷ ಸ್ಥಾನ ಮಾನಗಳನ್ನು ಕಲ್ಪಿಸಲು ವಿಧಿ ವಿಧಾನಗಳನ್ನು, ಅನೇಕ ಸಂರಕ್ಷಣಾ ಕಾಯ್ದೆಗಳನ್ನು, ಬುದ್ಧಿ ಪೂರ್ವಕವಾಗಿ ಅವರ ಹಿತಾಸಕ್ತಿಯನ್ನು ಕಾಪಾಡಲು ಜಾರಿಗೊಳಿಸಿದೆ. ಭಾರತದ ಯೋಜನಾ ಆಯೋಗದ ಅಭಿವೃದ್ಧಿ ಕಾರ್ಯಗಳಲ್ಲಿ ಬುಡಕಟ್ಟು ಜನರಿಗೆ ಉಪಯೋಜನೆ (Tribal Sub Plan-TSP) ಮತ್ತು ಪಂಚಾಯತ್ ಉಪಲಬ್ಧಗಳ (ಪರಿಶಿಷ್ಟ ಕ್ಷೇತ್ರಗಳಿಗೆ ವಿಸ್ತರಣೆ) ಕಾಯ್ದೆ 1996 (PESA) ಯನ್ನು ಜಾರಿಗೆ ತಂದಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಕರ್ನಾಟಕ ರಾಜ್ಯ ಕೊಳಚೆ ನಿಯಂತ್ರಣ ಮಂಡಳಿ, ಪರಿಸರ ಮತ್ತು ಜೀವ ಪರಿಸರ ಇಲಾಖೆ, ವಿಶ್ವವಿದ್ಯಾಲಯಗಳು, ಕಾನೂನು ವಿದ್ಯಾಲಯದ ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಅರೆಕಾಲಿಕ ಕಾನೂನು ಸ್ವಯಂ ಸೇವಕರು ಹಾಗೂ ಸ್ವಾಯತ್ತ ಸಂಸ್ಥೆಗಳ ಸಹಕಾರದೊಂದಿಗೆ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕ್ರಮ ತೆಗೆದುಕೊಂಡು, ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಆರ್ ಗುರುರಾಜನ್, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀಮತಿ ಸುನಿತ, ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ. ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಿರುತ್ತದೆ.

**7. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಮಾದಕ ಔಷಧ/ಮದ್ದು ದುರ್ಬಳಕೆಗೆ ಬಲಿಯಾದವರಿಗೆ ಕಾನೂನು ಸೇವೆಗಳು ಮತ್ತು ಮಾದಕ ಔಷಧ ವಿಪತ್ತಿನ ಭಯದ ನಿರ್ಮೂಲನೆ) ಯೋಜನೆ 2015.**

**ಯೋಜನೆಯ ಹಿನ್ನಲೆ :**

ಯುವಕರಲ್ಲಿ, ಮಕ್ಕಳಲ್ಲಿ, ವಯಸ್ಕರಲ್ಲಿ ಗೋಚರಿಸುವ ಮಾದಕ ವಸ್ತು (ಮದ್ದು) ಕಳ್ಳ ಸಾಗಣೆ/ದುರ್ವ್ಯವಹಾರ ಮತ್ತು ಔಷಧಿಗಳ ದುರುಪಯೋಗ ಹೆಚ್ಚುತ್ತಿದ್ದು ಅದರ ತೀವ್ರ ಪರಿಣಾಮ ದೇಶದ ಆರೋಗ್ಯ ಮತ್ತು ಆರ್ಥಿಕ ಸ್ಥಿತಿಯ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಅವುಗಳನ್ನು ಹತ್ತಿಕ್ಕುವುದು ರಾಜ್ಯ ಮತ್ತು ಸಮಾಜದ ಗರಿಷ್ಟ ಆದ್ಯತೆ.

ಮಾದಕ ವಸ್ತುಗಳು ತನ್ನ ಭಯಂಕರ ಬಾಹುಗಳಿಂದ ಮುಗ್ಧ ಮಕ್ಕಳು, ಹರೆಯದವರನ್ನು, ಯುವಕರನ್ನು ಮತ್ತು ಸ್ತ್ರೀಯರನ್ನು ಆವರಿಸಿರುವುದು ಬಹಿರಂಗ ಗುಟ್ಟು. ಈ ಪೀಡೆಯು ಆವರಿಸಿರುವ ಭಯಂಕರ ಪ್ರಮಾಣ ಅಂದಾಜು ಮಾಡುವುದಾದರೆ ಮದ್ದು, ಮಾದಕ ವಸ್ತುಗಳ ಬಳಕೆ ಪ್ರಾರಂಭಿಸುವವರು ಅತೀ ಕಡಿಮೆ ಅಂದರೆ 9–10 ವರ್ಷದ ವಯಸ್ಸಿನ ಮಕ್ಕಳು. ಇತ್ತೀಚಿನ ಪ್ರಯೋಗ ಸಿದ್ಧ ಅಧ್ಯಯನಗಳು ಬಯಲು ಮಾಡಿರುವ ವಿಚಾರವೆಂದರೆ ಸುಮಾರು ಏಳು ಕೋಟಿ ಜನರು ಮಾದಕ ವಸ್ತು ದುರುಪಯೋಗದಲ್ಲಿ ಪಾಲ್ಗೊಂಡಿದ್ದಾರೆ ಹಾಗೂ ಸುಮಾರು 17% ಪ್ರತಿಶತ ಚಟಕ್ಕೆ ದಾಸರಾಗಿದ್ದಾರೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ನಿಮ್ಹಾನ್ಸ್, ಬೆಂಗಳೂರು ಹಾಗೂ ಡಿಮ್ಹಾನ್ಸ್ ಧಾರವಾಡ, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಅರೆಕಾಲಿಕ ಕಾನೂನು ಸ್ವಯಂ

ಸೇವಕರ ಸಹಕಾರದೊಂದಿಗೆ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕ್ರಮ ತೆಗೆದುಕೊಂಡು, ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಟಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಜಾನ್ ಮೈಕಲ್ ಕುನ್ಹಾ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀಮತಿ ವೀಣಾ ಎನ್, ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ. ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಿರುತ್ತದೆ.

**8. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ(ಹಿರಿಯರ ನಾಗರಿಕರಿಗೆ ಕಾನೂನು ಸೇವೆಗಳು) ಯೋಜನೆ 2016.**

**ಯೋಜನೆಯ ಹಿನ್ನಲೆ :**

ಸಮಾಜದಲ್ಲಿ ಹಿರಿಯ ನಾಗರಿಕರದೇ ಒಂದು ವಿಶೇಷ ವರ್ಗವಾಗಿದೆ. ಅವರು ಹಲವಾರು ರೀತಿಗಳಲ್ಲಿ ಅನುಭವ ಮತ್ತು ಜ್ಞಾನದ ಗಣಿಯಾಗಿದ್ದಾರೆ. ಹೀಗಿದ್ದರೂ ಸಮಾಜದ ಯುವಜನತೆ ಅವರು ಸಮಾಜಕ್ಕೆ ಭಾರವೆಂದು ಭಾವಿಸಿ ಅವರನ್ನು ದೂರ ತಳ್ಳಿ ನಿರ್ಲಕ್ಷಿಸಿದ್ದಾರೆ. ಹಿರಿಯ ನಾಗರಿಕರದು ಒಂದೇ ತೆರನಾದ ಗುಂಪಾಗಿರದೆ ಅವರೊಳಗೇ ವಯಸ್ಸಿನ ಅಂತರಕ್ಕೆ ಅನುಗುಣವಾಗಿ ವಿವಿಧ ಗುಂಪುಗಳಿದ್ದು ಅವುಗಳ ದೈಹಿಕ ಹಾಗೂ ಮಾನಸಿಕ ಚುರುಕುತನ, ಅವರ ಕೆಲಸ ಮಾಡುವ ಶಕ್ತಿ ಬೇರೆ ಬೇರೆಯಾಗಿರುತ್ತವೆ.

ಹಿರಿಯ ನಾಗರಿಕರು ಅವರಿಗೆ ವಿಶಿಷ್ಟವಾದ ಸಾಮಾಜಿಕ, ದೈಹಿಕ, ಮಾನಸಿಕ, ಆರ್ಥಿಕ ಮತ್ತಿತರ ಅಸಂಖ್ಯಾತ ಸವಾಲುಗಳನ್ನು ಎದುರಿಸುತ್ತಿರುತ್ತಾರೆ. ಅವರು ಉದ್ಯೋಗ ಕಳೆದುಕೊಳ್ಳುವುದರಿಂದ ಅವರಿಗೆ ಬರುತ್ತಿದ್ದ ಆದಾಯ ತಪ್ಪಿಹೋಗುವುದರಿಂದ ಆರ್ಥಿಕ ಅಭದ್ರತೆ ಅವರನ್ನು ಕಾಡುತ್ತದೆ. ದೈಹಿಕ ಸಮಸ್ಯೆಗಳು

ಆರೋಗ್ಯ ಹಾಗೂ ವೈದ್ಯಕೀಯ ಸಮಸ್ಯೆಗಳನ್ನು ಒಳಗೊಂಡಿರುತ್ತದೆ. ಸಾಮಾಜಿಕ ಸಮಸ್ಯೆಗಳು ಕುಟುಂಬದ ಬೆಂಬಲವಿಲ್ಲದಿರುವುದು ಮತ್ತು ಸಮಾಜದೊಡನೆ ಹೊಂದಾಣಿಕೆಯಿಲ್ಲದಿರುವುದನ್ನು ಒಳಗೊಂಡಿರುತ್ತದೆ. ಭದ್ರತೆ ಹಿರಿಯ ವ್ಯಕ್ತಿಗಳಿಗೆ ಇರುವ ಮತ್ತೊಂದು ಮುಖ್ಯ ಸಮಸ್ಯೆಯಾಗಿದೆ. ಒಟ್ಟು ಕುಟುಂಬ ವ್ಯವಸ್ಥೆಯು ಒಡೆದುಹೋಗುವುದರಿಂದ ಈ ಸಮಸ್ಯೆ ಮತ್ತಷ್ಟು ತೀವ್ರವಾಗುತ್ತದೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ವಯಸ್ಸಾದವರು ತಮ್ಮನ್ನು ತಾವೇ ನೋಡಿಕೊಳ್ಳುವಂತಾಗಿಬಿಡುತ್ತಿದೆ. ಕುಟುಂಬದ ದುಡಿಯಬಲ್ಲ ಸದಸ್ಯರು ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವ ಪ್ರವೃತ್ತಿ ಹೆಚ್ಚುತ್ತಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಮತ್ತು ವಯಸ್ಸಾದವರು ಹೆಚ್ಚು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ.

ಹಿರಿಯರನ್ನು ವ್ಯವಸ್ಥಿತವಾಗಿ ಮತ್ತು ಸತತವಾಗಿ ದುರುಪಯೋಗಪಡಿಸಿಕೊಳ್ಳುತ್ತಿರುವುದಕ್ಕೆ ಪುರಾವೆಗಳು ದೊರೆಯುತ್ತಿವೆ (ಉದಾಹರಣೆಗೆ ದೈಹಿಕ, ಭಾವನಾತ್ಮಕ ಅಥವಾ ಮಾನಸಿಕವಾಗಿ ವಯಸ್ಸಾದವರ ಮೇಲೆ ಕಷ್ಟ ಕೊಡುವುದು). ವಯಸ್ಸಾದವರಲ್ಲಿ ಅರ್ಧದಷ್ಟು ಜನ ಅಗೌರವ ಹಾಗೂ ನಿರ್ಲಕ್ಷ್ಯವನ್ನು ಎದುರಿಸುವುದರ ಜೊತೆಗೆ ಅವರನ್ನು ದುರುಪಯೋಗಪಡಿಸಿಕೊಳ್ಳುವುದೂ ಕಂಡುಬಂದಿದೆ. ಆದುದರಿಂದ ಪ್ರತಿ ಸಮಾಜ ಹಾಗೂ ಸರ್ಕಾರವು ಸಮಾಜದ ಇತರ ವರ್ಗಗಳಿಗಿಂತ ವಿಭಿನ್ನವಾಗಿರುವ ಹಿರಿಯ ನಾಗರಿಕರಿಗೆ ಇರುವ ಕೆಲವು ಹಕ್ಕುಗಳನ್ನು ಪಡೆಯಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1ನೇ ಅಕ್ಟೋಬರ್ ಅನ್ನು ಅಂತರರಾಷ್ಟ್ರೀಯ ಹಿರಿಯ ನಾಗರಿಕರ ದಿನವೆಂದು ಘೋಷಿಸಲಾಗಿದ್ದು ಅದನ್ನು ಅಂತರರಾಷ್ಟ್ರೀಯ ವಯಸ್ಸಾದ ವ್ಯಕ್ತಿಗಳ ದಿನವೆಂದು ಕರೆಯಲಾಗುತ್ತದೆ.

ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಅಶೋಕ ಬಿ. ಹಿಂಚಿಗೇರಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀ ವೆಂಕಟೇಶ್ ನಾಯಕ್ ವಿ, ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ., ನಗರಾಭಿವೃದ್ಧಿ ಇಲಾಖೆ ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಿರುತ್ತದೆ.

**9. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಆಸಿಡ್ (ಆಮ್ಲ) ಧಾಳಿಯ ಸಂತ್ರಸ್ತರಿಗೆ ಕಾನೂನು ಸೇವೆಗಳು) ಯೋಜನೆ 2016.**

**ಯೋಜನೆಯ ಹಿನ್ನಲೆ :**

1.1 ಆಸಿಡ್ (ಆಮ್ಲ) ಧಾಳಿಯು ಹಿಂಸಾಚಾರದ ಅತೀ ಹೆಚ್ಚು ಭೀಕರ ರೂಪವಾಗಿದ್ದು ಅದು ಹೆಚ್ಚಾಗಿ ಲಿಂಗನಿರ್ದಿಷ್ಟವಾದುದಾಗಿರುತ್ತದೆ (ಅಂದರೆ ಹೆಚ್ಚಾಗಿ ಮಹಿಳೆಯರು ಇದಕ್ಕೆ ತುತ್ತಾಗುತ್ತಿದ್ದಾರೆ.). ಅಸಿಡ್ (ಆಮ್ಲ) ಧಾಳಿಯ ಬಗೆಗೆ ವಿಶ್ವದ ವಿವಿಧ ಭಾಗಗಳಿಂದ ವರದಿಯಾಗುತ್ತಿದ್ದರೂ ಭಾರತದಲ್ಲಿ ಆಸಿಡ್ (ಆಮ್ಲ) ಧಾಳಿಯ ಸಂಖ್ಯೆ ಏರುತ್ತಲೇ ಇದೆ. ರಾಷ್ಟ್ರೀಯ ಅಪರಾಧಗಳ ದಾಖಲೆಗಳ ಬ್ಯೂರೊ ಇಟ್ಟಿರುವ ದತ್ತಾಂಶದ ಪ್ರಕಾರ 2011ರಲ್ಲಿ ವರದಿಯಾದ ಆಸಿಡ್ (ಆಮ್ಲ) ದಾಳಿಗಳ ಸಂಖ್ಯೆ 83 ಆಗಿದ್ದರೆ 2012 ಮತ್ತು 2013ರಲ್ಲಿ ಇದು ಅನುಕ್ರಮವಾಗಿ 85 ಮತ್ತು 66 ಆಗಿರುತ್ತದೆ. ಭಾರತದಲ್ಲಿ ಆಸಿಡ್ (ಆಮ್ಲ) ಧಾಳಿಗೆ ಈಡಾಗಿ ಉಳಿದವರ ಫೌಂಡೇಶನ್ (ಆಸಿಡ್ ಸರ್ವೈವರ್ಸ್ ಫೌಂಡೇಶನ್ ಇಂಡಿಯಾ  ಎ.ಎಸ್.ಎಫ್.ಐ.) ಪ್ರಕಾರ ಅಂತಹ ಧಾಳಿಗಳು 2012ರಲ್ಲಿ ಕನಿಷ್ಠ 106, 2013ರಲ್ಲಿ 122 ಹಾಗೂ 2014ರಲ್ಲಿ 309 ವರದಿಯಾಗಿವೆ ಮತ್ತು ಇದರ ಕಾರ್ಯಕರ್ತರ ಪ್ರಕಾರ 2015ರಲ್ಲಿ ಅದು 500ಕ್ಕೆ ಏರಿತು. ಆದಾಗ್ಯೂ, ರಾಷ್ಟ್ರೀಯ ಅಪರಾಧಗಳ ದಾಖಲೆಗಳ ಬ್ಯೂರೊ ಪ್ರಕಾರ 2015ರಲ್ಲಿ 222 ಆಸಿಡ್ (ಆಮ್ಲ) ಧಾಳಿ ಪ್ರಕರಣಗಳು ವರದಿಯಾಗಿವೆ. ಈ ಸಂಖ್ಯೆಗಳು ಹೆಚ್ಚು ಕಡಿಮೆಯಾಗಬಹುದಾದರೂ

ಆಸಿಡ್ ಧಾಳಿ ಪ್ರಕರಣಗಳ ಸಂಖ್ಯೆ ಏರುತ್ತಲೇ ಇದೆ. ವರದಿಯಾಗದಿರುವ ಆಸಿಡ್ ಧಾಳಿಯ ಪ್ರಕರಣಗಳೂ ಇವೆ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ನಡೆವ ಧಾಳಿಗಳು ವರದಿಯಾಗದೇ ಹೋಗುತ್ತವೆ ಮತ್ತು ಇಂತಹ ಕೆಲವು ಧಾಳಿಗಳು ಸಾವಿನಲ್ಲಿ ಪರ್ಯವಸಾನಗೊಳ್ಳುತ್ತವೆ. ದುಷ್ಕರ್ಮಿಗಳಿಂದ ಪ್ರತೀಕಾರ ಎದುರಿಸಬೇಕಾಗಬಹುದೆಂಬ ಭಯದಿಂದ ಹಲವು ಇಂತಹ ಪ್ರಕರಣಗಳು ವರದಿಯಾಗುವುದೇ ಇಲ್ಲ.

1.2 ಭಾರತದಲ್ಲಿನ ಆಸಿಡ್ (ಆಮ್ಲ) ಧಾಳಿಯ ಪ್ರಕರಣಗಳು ಅವು ಸಾಮಾನ್ಯವಾಗಿ ಮಹಿಳೆಯರ ಮೇಲೆ ನಡೆಯುತ್ತವೆಯೆಂಬುದನ್ನು ತೋರಿಸುತ್ತವೆ. ಎಷ್ಟೋ ಸಲ ಅವು ಮದುವೆ ಪ್ರಸ್ತಾಪವನ್ನು ತಿರಸ್ಕರಿಸಿದುದರ ಅಥವಾ ಲೈಂಗಿಕ ಸಂಪರ್ಕ ನಿರಾಕರಿಸಿದುದರ ಫಲವಾಗಿ ನಡೆಯುತ್ತವೆಯೆಂಬುದನ್ನು ತೋರಿಸಿವೆ. ವರದಕ್ಷಿಣೆಗಾಗಿ ನಡೆಯುವ ಘರ್ಷಣೆಗಳ ಫಲಿತಾಂಶ ಕೂಡಾ ಆಸಿಡ್ (ಆಮ್ಲ) ಧಾಳಿಯಾಗಿರುತ್ತವೆ. ಸೇಡು ತೀರಿಸಿಕೊಳ್ಳುವ ದಾರಿಯಾಗಿ, ಕುಟುಂಬ ಘರ್ಷಣೆಗಳ ಫಲವಾಗಿ, ಜಮೀನು ವಿವಾದಗಳ ಕಾರಣಕ್ಕಾಗಿ ಅಥವಾ ವಾರಸುದಾರಿಕೆ ವಿವಾದಗಳ ಪರಿಣಾಮವಾಗಿ ಮತ್ತು ಇತರ ಆಸ್ತಿ ವಿವಾದದಿಂದಾಗಿಯೂ ಆಸಿಡ್ ಧಾಳಿ ನಡೆಯುತ್ತವೆ. ಒಮ್ಮೊಮ್ಮೆ ಆಸಿಡ್ ಧಾಳಿಯು ಸಾಮಾಜಿಕ, ರಾಜಕೀಯ ಅಥವಾ ಧಾರ್ಮಿಕ ನಂಬಿಕೆಗಳ ಕಾರಣಕ್ಕಾಗಿಯೂ ನಡೆಯುತ್ತವೆ.

1.3 ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಅತ್ಯಾಚಾರ, ಕೊಲೆ ಇತ್ಯಾದಿ ಅಪರಾದ ಕೃತ್ಯಗಳಿಗೆ ಬಲಿಪಶುರಾದವರಿಗೆ ಸಂತ್ರಸ್ಥ ಪರಿಹಾರ ಯೋಜನೆ 2011 ರ ಮೂಲಕ ಆರ್ಥಿಕ ಸಹಾಯವನ್ನು ನೀಡುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀಮತಿ. ರತ್ನಕಲಾ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀ ದಿಲೀಪ್ ಕುಮಾರ್, ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ., ನ್ಯಾಯಾಂಗ ಇಲಾಖೆ ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯಿಂದ ದಿನಾಂಕ:21.01.2022 ರಂದು ಸಭೆ ನಡೆಸಿ ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಲಾಗಿರುತ್ತದೆ.

**10. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಪ್ರಕೃತಿ ವಿಕೋಪಕ್ಕೆ ಒಳಗಾದ ಸಂತ್ರಸ್ಥರಿಗೆ ಕಾನೂನು ಸೇವೆಗಳು) ಯೋಜನೆ 2010.**

**ಯೋಜನೆಯ ಹಿನ್ನಲೆ :**

ಆಹಾರ, ಬರ, ಭೂಕಂಪ ಇತ್ಯಾದಿಗಳಂತಹ ಸಾಮೂಹಿಕ ಪ್ರಕೃತಿ ವಿಕೋಪಕ್ಕೆ ಬಲಿಯಾದ ವ್ಯಕ್ತಿಯು ಕಾನೂನು ಸೇವೆಗಳಿಗೆ ಅರ್ಹನಾಗಿರುತ್ತಾನೆ. ಆಗಾಗ ಸಂಭವಿಸುವ ಇಂತಹ ದುರಂತದ ಸಮಸ್ಯೆಗಳನ್ನು ಜನಸಾಮಾನ್ಯರು ಎದುರಿಸುತ್ತಾರೆ ಮತ್ತು ಅವರು ಸಹಾಯಕ್ಕಾಗಿ ಯಾರನ್ನು ಸಂಪರ್ಕಿಸಬೇಕು ಎಂಬುದರ ಬಗ್ಗೆ ಅವರಿಗೆ ತಿಳಿಸಿರುವುದಿಲ್ಲ. ಮಾನವನ ನೋವುಗಳು ಮತ್ತು ಹಾನಿಯನ್ನು ಅಂದಾಜು ಮಾಡಲು ಸಾಧ್ಯವಿಲ್ಲ. ಪ್ರಕೃತಿಯಾಗಲಿ ಅಥವಾ ಮಾನವ ನಿರ್ಮಿತ ದುರಂತವಾಗಲಿ ಆಗಾಗ್ಗೆ ತಿಳಿಯದೆ ಪ್ರಾಣಹಾನಿ, ಮನೆಯಿಲ್ಲದವರಾಗುವುದು, ಆಸ್ತಿಪಾಸ್ತಿ ನಾಶವಾಗುವುದು, ಪರಿಸರಕ್ಕೆ ಹಾನಿ ಅಥವಾ ಅವನತಿ ಮತ್ತು ಮಾನವನ ದುಃಖಗಳಿಗೆ ಒಳಪಡುವ ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಇದು ಬರಪೀಡಿತ ಪ್ರದೇಶದ ಸಮುದಾಯಗಳು ನಿಭಾಯಿಸುವ ಸಾಮರ್ಥ್ಯವನ್ನು ಮೀರಿದ ಹಾನಿಯಾಗಿರುತ್ತದೆ.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ವಿಪತ್ತು ನಿರ್ವಹಣಾ ಅಧಿಕಾರಿಗಳು ಮತ್ತು ಇತರ ಇಲಾಖೆಗಳು, ಎನ್‌ಜಿಓಎಸ್, ಪಿಎಲ್‌ವಿಎಸ್ ಸಹಯೋಗದೊಂದಿಗೆ ಯೋಜನೆಯು ಪರಿಣಾಮಕಾರಿ ಅನುಷ್ಠಾನಕ್ಕೆ ತಂದು ಸೂಕ್ತ ಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳ ಮೂಲಕ ಕೈಗೊಳ್ಳಲಾಗುವುದು.

ರಾಜ್ಯ ಪ್ರಾಧಿಕಾರವು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದವರು ನಿರ್ದೇಶಿಸಿರುವ ನೂತನ ಯೋಜನೆಗಳನ್ನು ಹಾಗೂ ಈಗಿರುವ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಮೇಲ್ಕಂಡ ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಿಗೆ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಿಗೆ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಯೋಜನೆಯ ಯಶಸ್ವಿ ಅನುಷ್ಟಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಕೆ.ಎನ್. ಕೇಶವನಾರಾಯಣ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀಮತಿ ದಾಕ್ಷಾಯಿಣಿ ಜಿ.ಕೆ., ನ್ಯಾಯಾಂಗ ಅಧಿಕಾರಿ, ಹೆಚ್.ಎಲ್.ಸಿ., ಡಿಪಿಎರ್, ಕೃಷಿ ಇಲಾಖೆ ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಿರುತ್ತದೆ.

**11. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಅರೆಕಾಲಿಕ ಕಾನೂನು ಸ್ವಯಂ ಸೇವಕರ) (ಪರಿಷ್ಕೃತ) ಯೋಜನೆ**

**ಯೋಜನೆಯ ಹಿನ್ನಲೆ :**

2009ರಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಪರಿಚಯಿಸಿರುವ ಅರೆಕಾಲಿಕ ಕಾನೂನು ಸ್ವಯಂ ಸೇವಕರ ಯೋಜನೆಯನ್ನು ಹೊರತಂದಿದ್ದು, ಇದು ಜೀವನದ ವಿವಿಧ ಹಂತಗಳಿಂದ ಆಯ್ಕೆಯಾದ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಕಾನೂನು ತರಬೇತಿಯನ್ನು ನೀಡುವ ಗುರಿಯನ್ನು ಹೊಂದಿದೆ. ಅರೆ ಕಾಲಿಕ ಕಾನೂನು ಸ್ವಯಂ ಸೇವಕರ ಯೋಜನೆಯ ಪ್ರಕ್ರಿಯೆಯ ಮೂಲಕ ಎಲ್ಲಾ ವರ್ಗದ ಜನರನ್ನು ತಲುಪುವ ಕಾನೂನು ನೆರವು ಅಂತಿಮವಾಗಿ ನ್ಯಾಯದ ಪ್ರವೇಶಕ್ಕೆ ಅಡೆತಡೆಗಳನ್ನು ತೆಗೆದು ಹಾಕುತ್ತದೆ. ಅರೆಕಾಲಿಕ ಕಾನೂನು ಸ್ವಯಂ ಸೇವಕರು, ಸಾಮಾನ್ಯ ಜನರು ಮತ್ತು ಕಾನೂನು ಸೇವಾ ಸಂಸ್ಥೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸುವ ನಿರೀಕ್ಷೆ ಇದೆ. ಅಂತಿಮವಾಗಿ ಈ ಪ್ರಕಿಯೆಯೂ ಕಾನೂನು ಸೇವೆಗಳ ಸಂಸ್ಥೆಗಳನ್ನು ಜನರು ಸಮೀಪಿಸುವುದಕ್ಕಿಂತ ಹೆಚ್ಚಾಗಿ ಅವರ ಮನೆ ಬಾಗಿಲಿಗೆ ತಲುಪುವ ಗುರಿಯನ್ನು ಹೊಂದಿದೆ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಅರೆಕಾಲಿಕ ಕಾನೂನು ಸ್ವಯಂ ಸೇವಕರ) (ಪರಿಷ್ಕೃತ) ಯೋಜನೆ, 2015 ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ ಸುಭಾಷ್ ಬಿ. ಅಡಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಶ್ರೀ ಗಗನ್ ಎಮ್ ಆರ್., ನ್ಯಾಯಾಂಗ ಅಧಿಕಾರಿ, ಕ.ರಾ.ಕಾ.ಸೇ.ಪ್ರಾ. (ವರ್ಗಾವಣೆ) ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಸೂಕ್ತ ಮಾರ್ಗದರ್ಶನವನ್ನು ಸಂಬಂಧಿಸಿದ ಇಲಾಖೆಗೆ ನೀಡಲಾಗಿರುತ್ತದೆ.

**ಉಚಿತ ಕಾನೂನು ಸಲಹಾ ಕೇಂದ್ರಗಳು:**

ಸಾರ್ವಜನಿಕರಿಗಾಗಿ ರಾಜ್ಯ ಪ್ರಾಧಿಕಾರವು ಈ ಕೆಳಕಂಡ ಸ್ಥಳಗಳಲ್ಲಿ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಉಚಿತ ಕಾನೂನು ಸೇವೆಗಳ ಕೇಂದ್ರಗಳನ್ನು ಪ್ರಾರಂಭಿಸಲಾಗಿದ್ದು, ಈ ಕೇಂದ್ರಗಳ ಮೂಲಕ ಸಾರ್ವಜನಿಕರು ದಿನನಿತ್ಯದ ಕಾನೂನು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

1) ಬೆಂಗಳೂರು ನಗರದಲ್ಲಿರುವ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕೇಂದ್ರ ಕಾರ್ಯಾಲಯದಲ್ಲಿನ ಫ್ರಂಟ್ ಆಫೀಸ್‌ನಲ್ಲಿ ಉಚಿತ ಕಾನೂನು ಸಲಹೆಯನ್ನು ಪ್ರತಿ ದಿನ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಪಡೆಯಬಹುದಾಗಿದೆ.

2) ಬೆಂಗಳೂರು ಅರಮನೆ ರಸ್ತೆಯಲ್ಲಿರುವ "ತಾಂತ್ರಿಕ ಶಿಕ್ಷಣ ಭವನ" ನೆಲಮಹಡಿಯಲ್ಲಿರುವ ಕಾನೂನು ಸೇವೆಗಳ ಕೇಂದ್ರದಲ್ಲಿ ಉಚಿತ ಕಾನೂನು ಸಲಹೆಯನ್ನು ಪ್ರತಿದಿನ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.30 ಗಂಟೆಯವರೆಗೆ ಪಡೆಯಬಹುದಾಗಿದೆ.

3) ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ ಹೊರರೋಗಿಯ ಕೇಂದ್ರದಲ್ಲಿ ಉಚಿತ ಕಾನೂನು ಸಲಹಾ ಕೇಂದ್ರದಲ್ಲಿ ಪ್ರತಿದಿನ (NIMHANS) ಸಮಯ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 04.00 ಗಂಟೆಯವರೆಗೆ ಉಚಿತ ಕಾನೂನು ಸಲಹೆಯನ್ನು ಪಡೆಯಬಹುದಾಗಿದೆ.

4) ಧಾರವಾಡ ನಗರದಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (DIMHANS) ಹೊರರೋಗಿಯ ಕೇಂದ್ರದಲ್ಲಿ ಉಚಿತ ಕಾನೂನು ಸಲಹಾ ಕೇಂದ್ರದಲ್ಲಿ ಪ್ರತಿ ಸೋಮವಾರ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 02.00 ಗಂಟೆಯವರೆಗೆ ಮತ್ತು ಬುಧುವಾರ ಸಮಯ ಮಧ್ಯಾಹ್ನ 02.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಉಚಿತ ಕಾನೂನು ಸಲಹೆಯನ್ನು ಪಡೆಯಬಹುದಾಗಿದೆ.

5) ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಹಾಗೂ ಉಳಿದ ಜಿಲ್ಲೆಗಳಲ್ಲಿರುವ ಕೇಂದ್ರ ಕಾರಾಗೃಹಗಳಲ್ಲಿ ವಾರದಲ್ಲಿ 5 ದಿನ, ಜಿಲ್ಲಾ ಕಾರಾಗೃಹಗಳಲ್ಲಿ 04 ದಿನ ಹಾಗೂ ಉಪಕಾರಾಗೃಹಗಳಲ್ಲಿ ವಾರದಲ್ಲಿ 2 ದಿನ ಉಚಿತ ಕಾನೂನು ಸೇವೆಗಳ ಕೇಂದ್ರದ

ಮೂಲಕ ಸಮಯ ಮಧ್ಯಾಹ್ನ 02.00 ಗಂಟೆಯಿಂದ ಸಂಜೆ 05.30 ಗಂಟೆಯವರೆಗೆ ಉಚಿತ ಕಾನೂನು ಸಲಹೆಯನ್ನು ಪಡೆಯಬಹುದಾಗಿದೆ.

6) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿರುವ ನ್ಯಾಯಾಲಯದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಾಲಯಗಳಲ್ಲಿರುವ ಉಚಿತ ಕಾನೂನು ಸೇವೆಗಳ ಕೇಂದ್ರಗಳ ಮೂಲಕ ಪ್ರತಿ ದಿನ ಸಮಯ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.30 ಗಂಟೆಯವರೆಗೆ ಉಚಿತ ಕಾನೂನು ಸಲಹೆಯನ್ನು ಪಡೆಯಬಹುದಾಗಿದೆ.

7) ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿರುವ ಸಿವಿಲ್ ನ್ಯಾಯಾಲಯದ ಆವರಣದಲ್ಲಿ ತಾಲ್ಲೂಕು ಕಾನೂನು ಸೇವೆಗಳ ಸಮಿತಿಯ ಕಾರ್ಯಾಲಯಗಳಲ್ಲಿರುವ ಉಚಿತ ಕಾನೂನು ಸಲಹಾ ಕೇಂದ್ರಗಳ ಮೂಲಕ ಪ್ರತಿ ದಿನ ಸಮಯ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.30 ಗಂಟೆಯವರೆಗೆ ಉಚಿತ ಕಾನೂನು ಸಲಹೆಯನ್ನು ಪಡೆಯಬಹುದಾಗಿದೆ.

8) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕು ಕೇಂದ್ರಗಳಲ್ಲಿರುವ ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯದಲ್ಲಿ ಉಚಿತ ಕಾನೂನು ಸೇವೆಗಳ ಕೇಂದ್ರಗಳಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 02.00 ರಿಂದ ಸಂಜೆ 05.30 ರವರೆಗೆ ಉಚಿತ ಕಾನೂನು ಸೇವೆಯನ್ನು ಪಡೆಯಬಹುದು.

9) ರಾಜ್ಯದ ಕಾನೂನು ಮಹಾ ವಿದ್ಯಾಲಯಗಳಲ್ಲಿ ಉಚಿತ ಕಾನೂನು ಸೇವೆಗಳ ಕೇಂದ್ರಗಳ ಮೂಲಕ ಕಾನೂನು ಸಲಹೆಯನ್ನು ನೀಡಲಾಗುವುದು.

10) ರಾಜ್ಯದ ಬಾಲ ನ್ಯಾಯ ಮಂಡಳಿಗಳಲ್ಲಿ ವಾರದಲ್ಲಿ ಒಂದು ದಿನ ಉಚಿತ ಕಾನೂನು ಸೇವೆಗಳ ಕೇಂದ್ರಗಳ ಮೂಲಕ ಕಾನೂನು ಸಲಹೆಯನ್ನು ನೀಡಲಾಗುವುದು.

11) ವಿಲೇಜ್ ಲೀಗಲ್ ಕೇರ್ & ಸಪೋರ್ಟ್ ಸೆಂಟರ್‌ಗಳಲ್ಲಿ ವಾರದಲ್ಲಿ ಒಂದು ದಿನ ಉಚಿತ ಕಾನೂನು ಸೇವೆಗಳ ಕೇಂದ್ರಗಳ ಮೂಲಕ ಕಾನೂನು ಸಲಹೆಯನ್ನು ನೀಡಲಾಗುವುದು.

12) ಆಸ್ಪತ್ರೆಗಳಲ್ಲಿರುವ ಎ.ಆರ್.ಟಿ. ಸೆಂಟರ್‌ನಲ್ಲಿ ತಿಂಗಳಿಗೆ ಎರಡು ದಿನ ಅಂದರೆ ತಿಂಗಳ ಮೊದಲನೇ ಶನಿವಾರ ಹಾಗೂ ಮೂರನೆಯ ಶನಿವಾರದಂದು ಉಚಿತ ಕಾನೂನು ಸೇವೆಗಳ ಕೇಂದ್ರಗಳ ಮೂಲಕ ಉಚಿತ ಕಾನೂನು ಸಲಹೆಯನ್ನು ನೀಡಲಾಗುವುದು.

13) ರಾಜ್ಯದಲ್ಲಿ 17 ಜಿಲ್ಲೆಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ವಿಲೇವಾರಿ ಮಾಡುವ ಸಲುವಾಗಿ ಎಲ್‌ಎಡಿಸಿ ಕಛೇರಿಗಳನ್ನು ತೆರೆಯಲಾಗಿದ್ದು, ಸದರಿ ಕಛೇರಿಗಳು ಪ್ರತಿ ದಿನ ಸಮಯ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.30 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತಿದ್ದು ಸದರಿ ಕಚೇರಿಗಳಲ್ಲಿ ಉಚಿತ ಕಾನೂನು ಸೇವೆಯನ್ನು ಪಡೆಯಬಹುದಾಗಿದೆ.

**ಜನತಾ ನ್ಯಾಯಾಲಯ (ಲೋಕ ಅದಾಲತ್)ಗಳು :**

- ಪ್ರಕರಣವೊಂದರ ಉಭಯ ಪಕ್ಷಗಳವರಲ್ಲಿ ರಾಜೀ ಸಂಧಾನ ಏರ್ಪಡಿಸುವ ಮೂಲಕ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಉದ್ದೇಶದಿಂದ ಉಚ್ಚ ಕಾನೂನು ಸೇವೆಗಳ ಸಮಿತಿ ಅಥವಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ನ್ಯಾಯಾಲಯದ ಅಥವಾ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ರಚಿಸುವ ನ್ಯಾಯಾಲಯವೇ "ಜನತಾ ನ್ಯಾಯಾಲಯ" (ಲೋಕ ಅದಾಲತ್)

**ಜನತಾ ನ್ಯಾಯಾಲಯಗಳಲ್ಲಿ ಎಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ? ಕೋರ್ಟ್‌ನಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುವ**

- ಮೋಟಾರು ವಾಹನ ಅಪಘಾತ ಸಂಬಂಧ ಪರಿಹಾರದ ಪ್ರಕರಣಗಳು;
- ಭೂ ಸ್ವಾಧೀನ ಸಂಬಂಧ ಪ್ರಕರಣಗಳು, ಪುರಸಭೆ, ಪಂಚಾಯಿತಿ, ವಿದ್ಯುತ್ ಮಂಡಳಿ ಮುಂತಾದ ಸ್ಥಳೀಯ ಸಂಸ್ಥೆಗಳ ಪರ ಮತ್ತು ವಿರುದ್ಧ ದಾಖಲಾದ ಪ್ರಕರಣಗಳು;
- ಬ್ಯಾಂಕುಗಳಿಗೆ ಸಂಬಂಧಿಸಿದ ಪ್ರಕರಣಗಳು;
- ವೈವಾಹಿಕ ಅಥವಾ ಜೀವನಾಂಶ ಪ್ರಕರಣಗಳು; ಕಾನೂನಿನನ್ವಯ ರಾಜೀ ಆಗಬಹುದಾದ ಕ್ರಿಮಿನಲ್ ಪ್ರಕರಣಗಳು;
- ಕಾರ್ಮಿಕ ನಷ್ಟ ಪರಿಹಾರ ಪ್ರಕರಣಗಳು;
- ಗ್ರಾಹಕರ ವಿವಾದಗಳಿಗೆ ಸಂಬಂಧಿಸಿದ ಪ್ರಕರಣಗಳು;
- ರಾಜಿ ಆಗಬಹುದಾದ ಎಲ್ಲಾ ವಿಧದ ಪ್ರಕರಣಗಳನ್ನು ಜನತಾ ನ್ಯಾಯಾಲಯಗಳ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು.

**ಜನತಾ ನ್ಯಾಯಾಲಯಗಳ ವೈಶಿಷ್ಟ್ಯ :**

- ವ್ಯಾಜ್ಯವನ್ನು ಜನತಾ ನ್ಯಾಯಾಲಯದ (ಲೋಕ ಅದಾಲತ್‌ನ) ಮೂಲಕ ಶೀಘ್ರವಾಗಿ ಇತ್ಯರ್ಥಗೊಳಿಸಿಕೊಳ್ಳಬಹುದು
- ಇಲ್ಲಿ ಯಾವುದೇ ಕೋರ್ಟ್ ಫೀಸ್ (ನ್ಯಾಯಾಲಯ ಶುಲ್ಕ) ಪಾವತಿಸುವಂತಿರುವುದಿಲ್ಲ.
- ಜನತಾ ನ್ಯಾಯಾಲಯದಲ್ಲಿ ನೀವು ವಕೀಲರ ಮುಖಾಂತರವೇ ಭಾಗವಹಿಸಬೇಕೆನ್ನುವ ನಿಯಮವೇನೂ ಇಲ್ಲ. ನೀವೇ ನೇರವಾಗಿ ಭಾಗವಹಿಸಬಹುದು
- ನಿಮ್ಮ ಪ್ರಕರಣದಲ್ಲಿ ನಿಮಗೆ ಮಾರ್ಗದರ್ಶನ ನೀಡಿ ರಾಜೀ ಸಂಧಾನ ಏರ್ಪಡಿಸಲು ಜನತಾ ನ್ಯಾಯಾಲಯದಲ್ಲಿ ಕನಿಷ್ಠ ಇಬ್ಬರು ಸಂಧಾನಕಾರರಿದ್ದು ಅವರಲ್ಲಿ ಒಬ್ಬರು ನ್ಯಾಯಾಧೀಶರೇ ಆಗಿರುತ್ತಾರೆ
- ಸಂಧಾನಕಾರರು ಸೂಚಿಸುವ ಪರಿಹಾರ ನಿಮಗೆ ತೃಪ್ತಿಯಾದಲ್ಲಿ ಮಾತ್ರ ನೀವು ರಾಜಿ ಮಾಡಿಕೊಳ್ಳಬಹುದು

**ಖಾಯಂ ಜನತಾ ನ್ಯಾಯಾಲಯಗಳು :**

ಸಾರ್ವಜನಿಕ ಉಪಯುಕ್ತ ಸೇವೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾಖಲಿಸದಿರುವ ವಿವಾದಗಳನ್ನು ಬೇಗ ಇತ್ಯರ್ಥಪಡಿಸುವುದಕ್ಕಾಗಿ ಕಾನೂನು ಸೇವೆಗಳ ಪ್ರಾಧಿಕಾರದ ಅಧಿನಿಯಮದ ಅಡಿಯಲ್ಲಿ ಖಾಯಂ ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಿದ್ದು, ಇವು ಸಾರ್ವಜನಿಕ ಉಪಯುಕ್ತ ಸೇವೆಗಳಿಗೆ ಸಂಬಂಧಿಸಿದ ವಿವಾದಗಳನ್ನು ಮಾತ್ರ ಇತ್ಯರ್ಥಗೊಳಿಸುತ್ತದೆ.

ಈ ನ್ಯಾಯಾಲಯಗಳಿಗೆ ಬರುವ ಪ್ರಕರಣಗಳಲ್ಲಿ ವಿವಾದಕ್ಕೊಳಗಾದ ಸ್ವತ್ತಿನ ಮೌಲ್ಯ ಹಾಗೂ ಹಣಕಾಸು ಸಂಸ್ಥೆಗಳ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಾಲದ ಮೌಲ್ಯ ಒಂದು ಕೋಟಿ ರೂಪಾಯಿಗಳನ್ನು ಮೀರಿರಬಾರದು. ಈ ನ್ಯಾಯಾಲಯಗಳಲ್ಲಿ ಉಭಯ ಪಕ್ಷಗಳವರು ರಾಜಿ ಮಾಡಿಕೊಳ್ಳಲು ಮಾರ್ಗದರ್ಶನ ನೀಡಲಾಗುವುದು. ರಾಜಿ ಸಂಧಾನ ವಿಫಲವಾದರೆ ಆ ಪ್ರಕರಣದ ವಿಚಾರಣೆ ನಡೆಸಿ ಅದನ್ನು ಇತ್ಯರ್ಥಗೊಳಿಸ ಲಾಗುವುದು. ಪ್ರಯಾಣಿಕರನ್ನು ಅಥವಾ ಸರಕನ್ನು ಸಾಗಿಸುವ ಸಾಗಣೆ ಸೇವೆ (ರೈಲ್ವೆ ಸಾಗಣೆ ಬಿಟ್ಟು) ಅಂಚೆ, ತಂತಿ ಅಥವಾ ದೂರವಾಣಿ ಸೇವೆ, ಸಾರ್ವಜನಿಕರಿಗೆ ಶಕ್ತಿ ಅಂದರೆ ವಿದ್ಯುತ್ ಅಥವಾ ಕರೆಂಟ್ ಅಥವಾ ಬೆಳಕು ಅಥವಾ ನೀರು ಸರಬರಾಜು ಮಾಡುವ ಯಾವುದೇ ಸಂಸ್ಥೆ ಸಾರ್ವಜನಿಕ ನೈರ್ಮಲ್ಯ ವ್ಯವಸ್ಥೆ, ವಿಮಾ ಸೇವೆ, ಆಸ್ಪತ್ರೆ ಅಥವಾ ಔಷಧಾಲಯದಲ್ಲಿಯ ಸೇವೆ, ಹಣಕಾಸು ಸಂಸ್ಥೆಗಳಿಗೆ

ಸಂಬಂಧಪಟ್ಟ ಪ್ರಕರಣಗಳು ಇವುಗಳನ್ನು ಸಾರ್ವಜನಿಕ ಉಪಯುಕ್ತ ಸೇವೆಗಳೆಂದು ಪರಿಗಣಿಸಲಾಗಿದೆ. ಇವುಗಳಲ್ಲದೆ ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ರಾಜ್ಯ ಅಥವಾ ಕೇಂದ್ರ ಸರ್ಕಾರ ಬೇರೆ ಯಾವುದೇ ಸೇವೆಯನ್ನು ಇವುಗಳ ಪಟ್ಟಿಗೆ ಸೇರಿಸಬಹುದಾಗಿದೆ.

ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಬೆಳಗಾವಿ ಹಾಗೂ ಗುಲ್ಬರ್ಗಾಗಳಲ್ಲಿ ಖಾಯಂ ಜನತಾ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿವೆ.

**ಮಧ್ಯಸ್ಥಿಕೆ ಕೇಂದ್ರ :**

ಮಧ್ಯಸ್ಥಿಕೆಯು ವಿವಾದ ಹೊಂದಿರುವ ಪಕ್ಷಕಾರರು ವಿಚಾರಣೆಗೆ ಹೋಗದೆ ತಮ್ಮ ವಿವಾದವನ್ನು ಸೃಜನಾತ್ಮಕವಾಗಿ ಇತ್ಯರ್ಥಪಡಿಸಿಕೊಳ್ಳಲು ಸಹಾಯ ಮಾಡುವ ಒಂದು ಪ್ರಕ್ರಿಯೆಯಾಗಿದೆ. ವಿವಾದ ಇತ್ಯರ್ಥಕ್ಕೆ ಮಧ್ಯಸ್ಥಿಕೆಯ ಎಲ್ಲಾ ಪಕ್ಷಕಾರರು ಹಾಗೂ ಅವರ ವಕೀಲರು ಸಕ್ರೀಯವಾಗಿ ಪಾಲ್ಗೊಳ್ಳುವಂತಹ ಒಂದು ವಿಶಿಷ್ಟ ಅವಕಾಶವನ್ನು ಇದು ಕಲ್ಪಿಸುತ್ತದೆ. ಮಧ್ಯಸ್ಥಿಕೆಯಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವು ಯಾವಾಗಲೂ ಪಕ್ಷಕಾರರದ್ದೇ ಆಗಿರುತ್ತದೆ. ಮಧ್ಯಸ್ಥಗಾರರು ವಿವಾದವೆತ್ತಿರುವ ಪಕ್ಷಕಾರರನ್ನು ವಿವಾದಕ್ಕೊಳಗಾಗಿರುವ ವಿಷಯವನ್ನು ಅರ್ಥ ಮಾಡಿಕೊಂಡು ಇತ್ಯರ್ಥಕ್ಕೆ ಬರಲು ಇರುವ ಅಡ್ಡಿ ಆತಂಕಗಳನ್ನು ನಿವಾರಿಸಲು ಪ್ರಯತ್ನ ಮಾಡುತ್ತಾನೆ.

ಮಧ್ಯಸ್ಥಿಕೆಯು ಸ್ವಪ್ರೇರಿತವಾದದ್ದಾಗಿರುತ್ತದೆ. ಮಧ್ಯಸ್ಥಿಕೆಯು ಯಾವಾಗಲೂ ಪಾರದರ್ಶಕವಾಗಿರುತ್ತದೆ. ಮಧ್ಯಸ್ಥಿಕೆಯಲ್ಲಿ ಹಣ ಮತ್ತು ಸಮಯ ಪೋಲಾಗುವುದಿಲ್ಲ. ಮಧ್ಯಸ್ಥಿಕೆಯಲ್ಲಿ ನಿಯಮ ಹಾಗೂ ಸಾಕ್ಷ್ಯಕ್ಕೆ ಬದಲಾಗಿ ಪಕ್ಷಕಾರರ ಹಿತಾಸಕ್ತಿಗಳ ಬಗೆಗೆ ಗಮನ ಹರಿಸಲಾಗುವುದು. ಮಧ್ಯಸ್ಥಿಕೆಯು ಪ್ರಕ್ಷಕಾರರು ತಾವೇ ವಿವಾದವನ್ನು ಇತ್ಯರ್ಥಗೊಳಿಸಿಕೊಳ್ಳಲು ಶಕ್ತರಾಗುವಂತೆ ಮಾಡುತ್ತದೆ. ಪ್ರಕರಣದ ಇತ್ಯರ್ಥ ಸಾಧ್ಯವಾಗದಿದ್ದಲ್ಲಿ ನ್ಯಾಯ ನಿರ್ಣಯಕ್ಕಾಗಿ ಅದನ್ನು ಮಧ್ಯಸ್ಥಿಕೆಗಾಗಿ ಕಳುಹಿಸಿದ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಲಾಗುವುದು. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಧ್ಯಸ್ಥಿಕೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಾಲಯವನ್ನು ಸಂಪರ್ಕಿಸಬಹುದು.

ವಾಣಿಜ್ಯ ವಿವಾಧಗಳನ್ನು ಮಧ್ಯಸ್ಥಿಕೆದಾರರ ಮೂಲಕ ವ್ಯಾಜ್ಯಪೂರ್ವವಾಗಿ ಇತ್ಯರ್ಥಪ ಸಲಾಗುವುದು (Commercial Courts (Pre-Institution Mediation and Settlement) Rules,2018)

**ಪರ್ಯಾಯ ವ್ಯಾಜ್ಯಗಳ ಪರಿಹಾರ ಕೇಂದ್ರ :**

ಸದರಿ ಕೇಂದ್ರಗಳ ಮೂಲಕವೂ ಸಹ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಪರಿಹರಿಸಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ.

**ರಾಜೀ ಸಂಧಾನ/ವ್ಯಾಜ್ಯ ಪೂರ್ವ ಪ್ರಕರಣ :**

ಸಾರ್ವಜನಿಕರು ದಿನ ನಿತ್ಯದ ಕಾನೂನು ಹಾಗೂ ಇತರೆ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಕಾರ್ಯಾಲಯಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅವರ ಸಮಸ್ಯೆಗಳನ್ನು ಪರಿಹರಿಸುವ ವ್ಯವಸ್ಥೆ ಮಾಡಲಾಗುವುದು.

**ಸ್ವಪ್ರೇರಿತ ಕಾನೂನು ಸಹಾಯಕರುಃ**
**(ಪ್ಯಾರಾ ಲೀಗಲ್ ವಾಲಂಟೀಯರ್ಸ್)**

ಕಾನೂನು ಸಹಾಯಕರಾಗಿ ತರಬೇತಿ ಪಡೆದವರು ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಅರ್ಹ ನಾಗರೀಕರ ನಡುವೆ ಪರಿಣಾಮಕಾರಿ ಸಮನ್ವಯಕಾರರಾಗಿ ಕಾರ್ಯನಿರ್ವಹಿಸುತ್ತಾರೆ.

ಸ್ವಪ್ರೇರಿತ ಕಾನೂನು ಸಹಾಯಕರು ತಮ್ಮ ಸುತ್ತ ಮುತ್ತಲಿನ ಪ್ರದೇಶದ ಶೋಷಿತ ಹಾಗೂ ತುಳಿತಕ್ಕೊಳಗಾದ ಜನರ ಸೇವೆ ಮಾಡಲು ಅರ್ಪಣಾ ಮನೋಭಾವ ಹೊಂದಿರುತ್ತಾರೆ. ಇವರು ಸರ್ಕಾರದ ವಿವಿಧ ಯೋಜನೆಗಳು, ಆದೇಶಗಳು, ಶಾಸನಗಳು, ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ, ಜನತಾ ನ್ಯಾಯಾಲಯಗಳು, ಪರ್ಯಾಯ ವಿವಾದ ಪರಿಹಾರ ವ್ಯವಸ್ಥೆ, ಉಚಿತ ಕಾನೂನು ಸಹಾಯ ಮತ್ತು ಸೇವೆಗಳ ಬಗೆಗೆ ಅರಿವನ್ನುಂಟುಮಾಡುವ ಸೇವೆಯನ್ನು ಸಲ್ಲಿಸುವುದಲ್ಲದೇ ನಾಗರೀಕರ ಹಕ್ಕುಗಳು ಹಾಗೂ ಹೊಣೆಗಳ ಬಗೆಗೆ ಶಿಕ್ಷಣ ನೀಡುವುದು, ಸಮಸ್ಯೆಗಳಿಗೆ ಪರಿಹಾರ/ಸಲಹೆ ಕೋರಿ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸುವ ಬಗೆಗೆ ಜನರಲ್ಲಿ ಅರಿವು ಮೂಡಿಸುವುದು, ತಮ್ಮ ಕಾರ್ಯಕ್ಷೇತ್ರದಲ್ಲಿ ನಡೆಯುವ ಕಾನೂನು ಉಲ್ಲಂಘನೆಯ ಹಾಗೂ ಅನ್ಯಾಯದ ಕಾರ್ಯಗಳ ಬಗೆಗೆ ಪರಿಣಾಮಕಾರಿ ಪರಿಹಾರ ಜರುಗಿಸಲು ಸಾಧ್ಯವಾಗುವಂತೆ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ಕಾನೂನು ಸೇವೆಗಳ ಸಮಿತಿಗೆ ಶೀಘ್ರವಾಗಿ ವರದಿ ಮಾಡುವುದು, ಕಾನೂನು ಅರಿವು ಶಿಬಿರಗಳನ್ನು ಬೇರೆಯವರ ಸಹಯೋಗದೊಂದಿಗೆ ವ್ಯವಸ್ಥೆಗೊಳಿಸುವುದು, ಕಾನೂನು ಸೇವೆಗಳ ಪ್ರಾಧಿಕಾರ/ಕಾನೂನು ಸೇವೆಗಳ ಸಮಿತಿಗಳು ಒದಗಿಸುವ ಸೇವೆಗಳ ಬಗೆಗೆ ಅರಿವನ್ನುಂಟುಮಾಡುವುದು, ಮಧ್ಯಸ್ಥಿಕೆ, ರಾಜಿ ಸಂಧಾನ ಮತ್ತು ಜನತಾ

ನ್ಯಾಯಾಲಯಗಳ ಮೂಲಕ ವಿವಾದಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ಇರುವ ಪ್ರಯೋಜನದ ಬಗೆಗೆ ನಾಗರೀಕರಿಗೆ ತಿಳುವಳಿಕೆ ನೀಡುವುದು, ಖಾಯಂ ಜನತಾ ನ್ಯಾಯಾಲಯಗಳಲ್ಲಿ ಸಾರ್ವಜನಿಕ ಉಪಯುಕ್ತ ಸೇವೆಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವುದು, ಇವೇ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸ್ವಪ್ರೇರಿತ ಕಾನೂನು ಸಹಾಯಕರು ಸಮಾಜದಲ್ಲಿ ಎಲ್ಲರಿಗೂ ನ್ಯಾಯಕ್ಕೆ ಪ್ರವೇಶಾವಕಾಶ ಸಿಗುವಲ್ಲಿ ಅರ್ಪಣಾ ಮನೋಭಾವದಿಂದ ಸದಾ ಶ್ರಮಿಸುತ್ತಿರುತ್ತಾರೆ.

**ಕಾನೂನು ಅರಿವು :**

ಜನರಲ್ಲಿ ಕಾನೂನು ಅರಿವು ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಅನೇಕ ಪುಸ್ತಕಗಳು, ಕಿರು ಹೊತ್ತಿಗೆಗಳು ಹಾಗೂ ಕರಪತ್ರಗಳನ್ನು ಪ್ರಕಟಿಸಿ ಸಾರ್ವಜನಿಕರಿಗೆ ಉಚಿತವಾಗಿ ಇಲ್ಲವೆ ಅತ್ಯಂತ ಕಡಿಮೆ ಬೆಲೆಗೆ ವಿತರಿಸುತ್ತಾ ಬಂದಿದೆ. ಎಲ್ಲಾ ವರ್ಗದ ಜನರಿಗೆ ಕಾನೂನು ಕಾರ್ಯಾಗಾರ, ಕಾನೂನು ಕಮ್ಮಟ ಗಳನ್ನು ಸರ್ಕಾರೇತರ ಸಂಸ್ಥೆಗಳು, ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಇತರ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಏರ್ಪಡಿಸುವುದರ ಜೊತೆಗೆ ಕಾನೂನು ಗೀತೆಗಳು, ಧ್ವನಿ ಸುರುಳಿಗಳು, ನಾಟಕಗಳು ಹಾಗೂ ಟೆಲಿ ನಾಟಕಗಳ ಮೂಲಕ ಜನರಲ್ಲಿ ಕಾನೂನಿನ ಬಗೆಗೆ ಅರಿವನ್ನುಂಟು ಮಾಡಲು ಪ್ರಾಧಿಕಾರವು ನಿರಂತರವಾಗಿ ಶ್ರಮಿಸುತ್ತಿದೆ.

**ಸುಂಕಮುಕ್ತ ಸಹಾಯವಾಣಿ (ಟೋಲ್ ಫ್ರೀ ಲೀಗಲ್ ಹೆಲ್ಪ್‌ಲೈನ್ ಮುಖಾಂತರ) ಉಚಿತ ಕಾನೂನು ಸಲಹೆ**

ದಿನಾಂಕ 16-10-2011 ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಉಚಿತ ಕಾನೂನು ಸಲಹೆಯನ್ನು ನೀಡುವ ಸಲುವಾಗಿ "ಟೋಲ್ ಫ್ರೀ" ಸಹಾಯವಾಣಿ ಸೇವೆಯನ್ನು ಆರಂಭಿಸಲಾಗಿದ್ದು, ಈ ಸೇವೆಯ ಸೌಲಭ್ಯವನ್ನು 24 ಗಂಟೆಗಳು ನಿರಂತರವಾಗಿ ಸಾರ್ವಜನಿಕರು ಪಡೆಯಬಹುದಾಗಿರುತ್ತದೆ.

| | |
|---|---|
| **ಟೋಲ್ ಫ್ರೀ ಸಂಖ್ಯೆ:** | **1800 425 90900** |

**ಉಚಿತ ಕಾನೂನು ಸಲಹೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು**

| | |
|---|---|
| **ಕಾನೂನು ಸೇವೆಗಳ ಕೇಂದ್ರ, ಬೆಂಗಳೂರು** | **080-22373187** |

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ,
"ನ್ಯಾಯದೇಗುಲ" ಮೊದಲನೇ ಮಹಡಿ, ಹೆಚ್. ಸಿದ್ಧಯ್ಯ ರಸ್ತೆ,

ಬೆಂಗಳೂರು 560 027.

## ದೂರವಾಣಿ/ಮೊಬೈಲ್ ಸಂಖ್ಯೆಗಳು

| ಕ್ರ.ಸಂ | ದೂರವಾಣಿ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|
| 1 | 080–22111875 | 9141178298 |
| 2 | 080–22111730 | 8277543059 |
| 3 | 080–22111729 | 9448068443 |
| 4 | 080–22111714 | 9448068444 |
| 5 | 080–22111716 | |

## ಈ ಕೆಳಕಂಡ ಉಚ್ಚ ನ್ಯಾಯಾಲಯಗಳ ಕಾನೂನು ಸೇವೆಗಳ ಸಮಿತಿ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳನ್ನು ಸಹ ಸಂಪರ್ಕಿಸಿರಿ

| ಕ್ರ.ಸಂ. | ಕಛೇರಿಯ ಹೆಸರು | ದೂರವಾಣಿ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| ಉಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಸಮಿತಿಯ ಕಛೇರಿಗಳು | | | |
| 1 | ರಾಜ್ಯ ಉಚ್ಚನ್ಯಾಯಾಲಯದ ಕಾನೂನು ಸೇವೆಗಳ ಸಮಿತಿ ಪ್ರಧಾನ ಪೀಠ, ಬೆಂಗಳೂರು. | 080–22869988 | 9141193913 |
| 2 | ಧಾರವಾಡ ಪೀಠ, ಧಾರವಾಡ. | 0836–2485242 | 9141193914 |
| 3 | ಕಲಬುರಗಿ ಪೀಠ, ಕಲಬುರಗಿ. | 08472–264141 | 9141193915 |
| ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಗಳು | | | |
| 4 | ಬೆಂಗಳೂರು ನಗರ | 080–22215143 | 9141193926 |
| 5 | ಬೆಂಗಳೂರು (ಗ್ರಾ) | 080–22222919 | 9141193927 |
| 6 | ಬಾಗಲಕೋಟ | 08354–235876 | 9141193928 |
| 7 | ಬೆಳಗಾವಿ | 0831–2423216 | 9141193930 |
| 8 | ಬಳ್ಳಾರಿ | 08392–278077 | 9141193929 |
| 9 | ಬೀದರ್ | 08482–226116 | 9141193931 |
| 10 | ವಿಜಯಪುರ | 08352–276150 | 9141193923 |
| 11 | ಚಾಮರಾಜನಗರ | 08226–226022 | 9141193932 |
| 12 | ಚಿಕ್ಕಬಳ್ಳಾಪುರ | 08156–275080 | 9141193933 |
| 13 | ಚಿಕ್ಕಮಗಳೂರು | 08262–228933 | 9141193934 |
| 14 | ಚಿತ್ರದುರ್ಗ | 08194–222322 | 9141193935 |
| 15 | ಮಂಗಳೂರು(ದ.ಕ) | 0824–2448111 | 9141193936 |

| | | | |
|---|---|---|---|
| 16 | ದಾವಣಗೆರೆ | 08192–237022 | 9141193937 |
| 17 | ಧಾರವಾಡ | 0836–2740128 | 9141193938 |
| 18 | ಗದಗ | 08372–232534 | 9141193940 |
| 19 | ಕಲಬುರಗಿ | 08472–253370 | 9141193944 |
| 20 | ಹಾಸನ | 08172–268356 | 9141193942 |
| 21 | ಹಾವೇರಿ | 08375–233939 | 9141193943 |
| 22 | ಕೊಡಗು(ಮಡಿಕೇರಿ) | 08272–222373 | 9141193945 |
| 23 | ಕೋಲಾರ | 08152–228811 | 9141193948 |
| 24 | ಕೊಪ್ಪಳ | 08539–220233 | 9141193951 |
| 25 | ಮಂಡ್ಯ | 08232–229345 | 9141193952 |
| 26 | ಮೈಸೂರು | 0821–2330130 | 9141193953 |
| 27 | ರಾಯಚೂರು | 08532–228476 | 9141193954 |
| 28 | ರಾಮನಗರ | 080–27273445 | 9141193957 |
| 29 | ಶಿವಮೊಗ್ಗ | 08182–222218 | 9141193958 |
| 30 | ತುಮಕೂರು | 0816–2255133 | 9141193959 |
| 31 | ಉಡುಪಿ | 0820–2523355 | 9141193960 |
| 32 | ಕಾರವಾರ (ಉ.ಕ) | 08382–222990 | 9141193961 |
| 33 | ಯಾದಗಿರಿ | 08473–253243 | 9141193924 |
| **ಖಾಯಂ ಜನತಾ ನ್ಯಾಯಾಲಯಗಳ ಕಾರ್ಯಾಲಯದ ದೂರವಾಣಿ ಸಂಖ್ಯೆಗಳು** | | | |
| 34 | ಬೆಂಗಳೂರು | 080–22371011 | – |
| 35 | ಬೆಳಗಾವಿ | 0831–2422300 | – |
| 36 | ಧಾರವಾಡ | 0836–2442282 | – |
| 37 | ಗುಲ್ಬರ್ಗ | 08472–255364 | – |
| 38 | ಮೈಸೂರು | 0821–2330130 | – |
| 39 | ಮಂಗಳೂರು (ದ.ಕ) | 0824–2455349 | – |

ಸದಸ್ಯ ಕಾರ್ಯದರ್ಶಿ
ಕ.ರಾ.ಕಾ.ಸೇ.ಪ್ರಾ., ಬೆಂಗಳೂರು